ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

**ಸಿ. ಸಿ. ನಂ ಃ 421/2008**

ಪಿಡಬ್ಲ್ಯು - 8
ಸಿಡಬ್ಲ್ಯು - 5

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಎ ಯು ಪೂಣಚ್ಚ |
| ತಂದೆಯ ಹೆಸರು | ಃ | ಉತ್ತಪ್ಪ |
| ವಯಸ್ಸು | ಃ | 72 ವರ್ಷ |
| ವೃತ್ತಿ | ಃ | ಮಾಜಿ ಸೈನಿಕ, |
| ವಾಸಸ್ಥಳ | ಃ | ಸುಭಾಷ್ ನಗರ ವಿರಾಜಪೇಟೆ ನಗರ |

**ದಿನಾಂಕ ಃ 09-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಶ್ರೀ. ಎಪಿಪಿಯವರಿಂದಃ- **ಭಾ. ದಂ. ಸಂ. 299 ರಡಿಯಲ್ಲಿ ಮುಖ್ಯ ವಿಚಾರಣೆ**

ಚಾಸಾ-1 ರವರ ಪರಿಚಯವಿರುತ್ತದೆ. ಅವರು ವಿರಾಜಪೇಟೆಯ ಎಸ್ ಬಿ ಐ ಬ್ಯಾಂಕ್ ನ ವ್ಯವಸ್ಥಾಪಕರು. ಚಾಸಾ4 ರವರ ಪರಿಚಯವಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಮಹಜರ ಕ್ರಮ ಜರುಗಿಸಿ ಯಾವುದೇ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ನಿಪಿ 23 ನ್ನು ತೋರಿಸಲಾಗಿ, ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸದರಿ ಸಹಿಯನ್ನು ಗುರುತಿಸಿದ ಮೇರೆಗೆ ನಿಪಿ23 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ23(ಸಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದಿರುವ ನಿಪಿ 2 ರಿಂದ 22 ನ್ನು ನಾನು ಈ ಮೊದಲು ನೋಡಿರುವುದಿಲ್ಲ, ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.

(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು.**)

**<u>ಪಾಟೀ ಸವಾಲು ಶ್ರೀ. </u>ಸರ್ಕಾರಿ ವಕೀಲರಿಂದ**ಃ-

ದಿನಾಂಕ 16-03-2005 ರಂದು ವಿರಾಜಪೇಟೆ ಪೋಲಿಸ್ ಠಾಣೆಯಲ್ಲಿ ನನ್ನ, ಚಾಸಾ-1 ಹಾಗೂ ಚಾಸಾ4 ರವರ ಸಮಕ್ಷಮ ಚಾಸಾ-26 ರವರು ಮಹಜರ ಕ್ರಮ ಜರುಗಿಸಿ ನಿಪಿ2 ರಿಂದ 22 ನ್ನು ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನಾಂಕದಂದು ನಿಪಿ 23 ನ್ನು ಬರೆಯುವಾಗ

ನಾನು ಸ್ಥಳದಲ್ಲಿದ್ದು, ನಿಪಿ23 ರಲ್ಲಿರುವ ಸಂಗತಿಗಳನ್ನು ತಿಳಿದುಕೊಂಡು, ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.